ಶ್ರೀ ಕಲ್ಲಪ್ಪ ನಾಗಪ್ಪ ಗದ್ದಿ :- ವೃತ್ತಿ ಶಿಕ್ಷಣದ ಬಗ್ಗೆ ಹೆಚ್ಚು ಮಹತ್ವವನ್ನು ಕೊಡುವ ಅವಶ್ಯಕತೆ ಇದೆ. ಶಿಗ್ಗಾಂ ಮತ್ತು ನವಲಗುಂದ ಅಂತಹ ತಾಲ್ಲೂಕು ಮಟ್ಟದಲ್ಲಿ ಸರ್ಕಾರದ ವತಿಯಿಂದ ಐ.ಟಿ.ಐ. ಕಾಲೇಜುಗಳನ್ನು ತೆರೆಯಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಗುರುನಾಥ್ :- ಈಗ ಸಧ್ಯದಲ್ಲಿ ಅಲ್ಲಿರತಕ್ಕಂತಹ ವಿದ್ಯಾರ್ಥಿಗಳಿಗೆ ತೊಂದರೆಯಾದರೆ, ಅದರ ಸಮೀಪ ಇರತಕ್ಕಂತಹ ಐ.ಟಿ.ಐ.ನಲ್ಲಿ ಪ್ರವೇಶಕ್ಕೆ ಅನುಕೂಲ ಮಾಡಿ ಕೊಡಬಹುದು.

ವಿಷಯ :- ರಾಜ್ಯದಲ್ಲಿ ಆಗರಬತ್ತಿ ಕಾರ್ಮಿಕರ ಸಮಸ್ಯೆಗಳು

ಚುಕ್ಕೆ ರಹಿತ ಪ್ರಶ್ನೆ 403 (2953)

ಶ್ರೀ ಜಿ. ವಿ. ಶ್ರೀ ರಾಮರೆಡ್ಡಿ (ಬಾಗೇಪಲ್ಲಿ) :- ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಆಗರಬತ್ತಿ ಉದ್ಯಮದಲ್ಲಿ ದುಡಿಯುತ್ತಿರುವ ಪುರುಷ : ಮಹಿಳಾ ಕಾರ್ಮಿಕರ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ಒದಗಿಸುವುದು).

ಆ) ರಾಜ್ಯದಲ್ಲಿ ಆಗರಬತ್ತಿ ತಯಾರಿಕೆಯಲ್ಲಿ ನೊಂದಾಯಿತ ಮತ್ತು ನೊಂದಾವಣೆ ಇಲ್ಲದ ಕಂಪನಿಗಳು ಎಷ್ಟು ; (ಜಿಲ್ಲಾವಾರು ವಿವರ ಒದಗಿಸುವುದು)?

ಇ) ಈ ಉದ್ಯಮದಲ್ಲಿ ಮನೆಯಲ್ಲಿ ದುಡಿಯುವ ಮಹಿಳಾ ಕಾರ್ಮಿಕರ ದಾಖಲೆ ಗಳಿವೆಯೇ?

ಈ) ಆಗರಬತ್ತಿ ಉದ್ಯಮದಲ್ಲಿ ಮನೆಯಲ್ಲಿ ದುಡಿಯುವ ಮಹಿಳಾ ಕಾರ್ಮಿಕರಿಗೆ ವೈದ್ಯಕೀಯ, ಕಾರ್ಮಿಕ ಭವಿಷ್ಯ ನಿಧಿ, ಬೋನಸ್ ಕಾಯ್ದೆಗಳು ಜಾರಿಯಲ್ಲಿವೆಯೇ ;

ಉ) ಜಾರಿಯಲ್ಲಿಲ್ಲದ ಪಕ್ಷದಲ್ಲಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :-

ಅ) ಜಿಲ್ಲೆಯ ಹೆಸರು	ಮಹಿಳೆಯರು	ಪುರುಷರು
1. ಬೆಂಗಳೂರು	2,377	638
2. ಮೈಸೂರು	516	50
3. ಕೋಲಾರ	20	30
ಒಟ್ಟು	2,913	718

ಆ) ನೊಂದಾಯಿತ ಕಂಪನಿಗಳು.

1. ಬೆಂಗಳೂರು ಜಿಲ್ಲೆಯಲ್ಲಿ :55
2. ಮೈಸೂರು ಜಿಲ್ಲೆಯಲ್ಲಿ : 11
3. ಕೋಲಾರ ಜಿಲ್ಲೆಯಲ್ಲಿ : 01

ಒಟ್ಟು : 67

ನೊಂದಾವಣೆ ಇಲ್ಲದ ಕಂಪನಿಗಳ ಮಾಹಿತಿ ಲಭ್ಯವಿರುವುದಿಲ್ಲ.

ಇ) ಇಲ್ಲ.

ಈ) ಇಲ್ಲ.

ಉ) ಈ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಜಿ. ವಿ. ಶ್ರೀ ರಾಮರೆಡ್ಡಿ :- ನನ್ನ ಮೊದಲನೆಯ ಪ್ರಶ್ನೆಗೆ ಕೊಟ್ಟಿರತಕ್ಕಂತಹ ಅಂಕಿಅಂಶಗಳು ಏನು ಇವೆ, ಕರ್ನಾಟಕ ರಾಜ್ಯದಲ್ಲಿ ಅಗರಬತ್ತಿ ಉದ್ದಿಮೆಯಲ್ಲಿ ದುಡಿಯುತ್ತಿರುವ ಪುರುಷ ಮತ್ತು ಮಹಿಳಾ ಕಾರ್ಮಿಕರ ಸಂಖ್ಯೆ ಎಷ್ಟು ಎಂಬುದು ನನ್ನ ಪ್ರಶ್ನೆ. ಅದಕ್ಕೆ ಅವರು ಉತ್ತರ ಕೊಟ್ಟಿದ್ದಾರೆ, 3 ಜಿಲ್ಲೆಗಳಲ್ಲಿ ಅಂತ ಹೇಳಿ. ಈ ಅಂಕಿ ಸಂಖ್ಯೆಗಳನ್ನು ಯಾವ ವರ್ಷದಲ್ಲಿ ತಯಾರು ಮಾಡಿದರು ಎಂಬುದಾಗಿ ಕೇಳಬೇಕಾಗುತ್ತದೆ. ಏಕೆಂದರೆ ನಾನು ಒಂದು ಉದಾಹರಣೆಯನ್ನು ಹೇಳುವುದಾದರೆ, ಕೋಲಾರ ಜಿಲ್ಲೆಯಲ್ಲಿ 20 ಮಹಿಳೆಯರು ಮತ್ತು 30 ಪುರುಷರು ಎಂದು ಕೊಟ್ಟಿದ್ದಾರೆ. ಕೋಲಾರ ಜಿಲ್ಲೆಯ ಚಿಂತಾಮಣಿ ಎನ್ನತಕ್ಕಂತಹ ಒಂದೇ ಒಂದು ತಾಲ್ಲೂಕು ಕೇಂದ್ರದಲ್ಲಿ ಸುಮಾರು 60 ಅಗರಬತ್ತಿ ಕಂಪನಿಗಳೇ ಇವೆ. ಈ 60 ಕಂಪನಿಗಳಲ್ಲಿ ಕನಿಷ್ಠ ಒಬ್ಬರಂತೆ ಕೆಲಸ ಮಾಡಿದರೂ ಕೂಡ 60 ಅಗಬೇಕಾಗುತ್ತದೆ. ಆದ್ದರಿಂದ ಈ ಅಂಕಿ ಸಂಖ್ಯೆಗಳನ್ನು ಯಾವಾಗ ತಯಾರು ಮಾಡಿದರು ಎಂಬುದು ನನ್ನ ಮೊದಲನೆಯ ಪ್ರಶ್ನೆ. ಈ ಅಂಕಿ ಅಂಶಗಳು ಸಂಪೂರ್ಣವಾಗಿ ತಪ್ಪು ಅಂಕಿ ಅಂಶಗಳು ಇವು. ಯಾವುದೋ ಓಬಿರಾಯನ ಕಾಲದಲ್ಲಿ ತಯಾರು ಮಾಡಿದಂತಹ ಅಂಕಿ ಅಂಶಗಳು ಇವು. ಈ ಅಂಕಿ ಅಂಶಗಳು ಏಕೆ ಬಂದಿದೆ ಎಂದರೆ, ಇನ್ನೊಂದು ಪ್ರಶ್ನೆ (ಆ) ರಲ್ಲಿ ನೋಂದಾಯಿತ ಕಂಪನಿಗಳೆಷ್ಟು ಎಂದು ನಾನು ಕೇಳಿದ್ದೇನೆ. ನೋಂದಾಯಿತ ಕಂಪನಿಗಳು ಎಷ್ಟು ಕೊಟ್ಟಿದ್ದಾರೆ ಅಂದರೆ ಬೆಂಗಳೂರು ಜಿಲ್ಲೆಯಲ್ಲಿ 55. ಮೈಸೂರು ಜಿಲ್ಲೆಯಲ್ಲಿ 110. ಕೋಲಾರ ಜಿಲ್ಲೆಯಲ್ಲಿ 10 ಎಂದು ಕೊಟ್ಟಿದ್ದಾರೆ. ಏಕೆ ಈ ತಪ್ಪು ಅಂಕಿ ಅಂಶಗಳನ್ನು ಸರ್ಕಾರದವರು ಕೊಟ್ಟಿದ್ದಾರೆಂದರೆ, ಇವರು ನೋಂದಾಯಿಸುವುದಿಲ್ಲ. ಲೇಬರ್ ಡಿಪಾರ್ಟ್‌ಮೆಂಟ್ ಏನು ಇದೆ, ಆ ಲೇಬರ್ ಡಿಪಾರ್ಟ್‌ಮೆಂಟ್‌ನವರು ಎಲ್ಲೆಲ್ಲಿ ಅಗರಬತ್ತಿ ತಯಾರು ಮಾಡುತ್ತಾರೆ, ಅಲ್ಲಿಗೆ ಹೋಗಿ ಎಷ್ಟು ಜನ ಕಾರ್ಮಿಕರು ಕೆಲಸ ಮಾಡುತ್ತಾರೆ? ಕಾನೂನು ಬದ್ಧವಾಗಿ ಲೈಸನ್ಸ್ ಪಡೆಯಬೇಕಾಗಿರತಕ್ಕ ಸಂದರ್ಭದಲ್ಲಿ ಲೈಸನ್ಸ್‌ನ್ನು ಕೊಡುವುದಿಲ್ಲ, ಶಾಮೀಲಾಗುತ್ತಾರೆ. ಯಾಕೆ ಅಂದರೆ ಕಾರ್ಮಿಕ ಇಲಾಖೆ ಶಾಮೀಲಾಗಿ ಕಂಪನಿಗಳ ಮಾಲೀಕರ ಜೊತೆಗೆ ಲೈಸನ್ಸ್ ಕೊಡುತ್ತಿಲ್ಲ. ಮತ್ತು ನನ್ನ ಇನ್ನೊಂದು ಪ್ರಶ್ನೆಗೆ ಏನು ಹೇಳಿದ್ದಾರೆಂದರೆ, ಈ ಉದ್ದಿಮೆಯಲ್ಲಿ ಮನೆಯಲ್ಲಿ ದುಡಿಯುವ ಮಹಿಳಾ ಕಾರ್ಮಿಕರು ಇದ್ದಾರೆಯೇ ಎಂದು ಕೇಳಿದಾಗ ಇಲ್ಲ ಎಂದು ಹೇಳಿದ್ದಾರೆ. ಇದು ಇದೆ. ಏಕೆಂದರೆ ಅಗರಬತ್ತಿ ಮತ್ತು ಬೀಡಿ, ಮನೆಗಳಲ್ಲಿ ಮಹಿಳೆಯವರು ಹೆಚ್ಚು ಈ ಉದ್ದಿಮೆಯಲ್ಲಿ ಅವಲಂಬಿಸತಕ್ಕ ಉದ್ದಿಮೆ ಅಗರಬತ್ತಿ. ಅದನ್ನು ಗಣನೆಗೆ ತೆಗೆದುಕೊಂಡಿಲ್ಲ ಇವರು. ಹಾಗಾಗಿ ಕಾರ್ಮಿಕ ಇಲಾಖೆಯ ವತಿಯಿಂದ ಕಾನೂನು ಬದ್ಧವಾಗಿ ಅವರಿಗೆ ಏನು ಅನುಕೂಲತೆಗಳು ಸಿಕ್ಕಬೇಕೋ ಅದು ಸಿಕ್ಕುತ್ತಿಲ್ಲ. 2 ನೇಯದು ಟ್ಯಾಕ್ಸ್ ಇವೇಷನ್. ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ ಇದಕ್ಕೆ ಅಂತರರಾಷ್ಟ್ರೀಯ ಮಾರುಕಟ್ಟೆ ಇದೆ, ಅಗರಬತ್ತಿಗೆ. ಎಕ್ಸ್‌ಪೋರ್ಟ್ ಮಾಡುತ್ತಾರೆ. ಬಹಳ ಅತ್ಯುತ್ತಮವಾದ ಅಗರಬತ್ತಿ ನಮ್ಮ ದೇಶದಲ್ಲಿ ತಯಾರಾಗುತ್ತದೆ. ಎಕ್ಸ್‌ಪೋರ್ಟ್ ಮಾಡತಕ್ಕಂತಹ ಅಗರಬತ್ತಿಗೆ ವಿಪರೀತವಾದಂತಹ ಲಾಭ ಬರುತ್ತದೆ. ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಒಂದು ವರ್ಷಕ್ಕೆ ಅಗರಬತ್ತಿ ಉದ್ಯಮದಲ್ಲಿ 2,860 ಕೋಟಿ ರೂಪಾಯಿ ಇವರಿಗೆ ಕಾನೂನು ಬದ್ಧವಾಗಿ ಟ್ಯಾಕ್ಸ್ ಬರುತ್ತದೆ. ಯಾವಾಗ ಅಂದರೆ ಕಾನೂನು ಬದ್ಧವಾಗಿ ಆ ಕಂಪನಿಗಳನ್ನು ನೋಂದಾಯಿಸಿದಾಗ ನೋಂದಾಯಿಸುವ ಕೆಲಸಕ್ಕೆ ಹೋಗಿಲ್ಲ. ಏಕೆ ಎಂಬುದರ ಬಗ್ಗೆ ನನಗೆ ಕಾರ್ಮಿಕ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಸಿ. ಗುರುನಾಥ್ :- ಈಗ ಮಾನ್ಯ ಸದಸ್ಯರು ಕೇಳಿರತಕ್ಕಂತಹ ಉಪ ಪ್ರಶ್ನೆಗೆ ಏನು ಇದೆ, ಇದರ ಮೇಲೆ ಕೋಲಾರ ಜಿಲ್ಲೆಯಲ್ಲಿ 60 ಕಾರ್ಖಾನೆಗಳು ಇವೆ ಎಂದು ಅವರು ಹೇಳಿದರು. ನಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ, ಆಗರಬತ್ತಿ ಇಂಡಸ್ಟ್ರೀಸ್‌ಗೆ ಲೈಸನ್ಸ್ ಕೊಡ ಬೇಕಾದರೆ ಕಾರ್ಖಾನೆಯವರಿಗೆ ಮಾತ್ರ ಕೊಡುವುದು. ಆ ಪ್ರಕಾರ ಲೈಸನ್ಸ್ ಅವರಿಗೆ ಕೊಟ್ಟಿರುತ್ತೇವೆ. ಒಂದು ವೇಳೆ ಮನೆಯಲ್ಲೇ ಕುಳಿತುಕೊಂಡು ಕೆಲಸ ಮಾಡಿದರೆ, ಅಂತಹವರ ಬಗ್ಗೆ ಯಾವುದೇ ಅಂಕಿ ಅಂಶ ನಮ್ಮ ಇಲಾಖೆಯಲ್ಲಿ ಇರುವುದಿಲ್ಲ. ಆಮೇಲೆ ನೋಂದಣಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಒಂದು ವೇಳೆ ಯಾರಾದರೂ ಲೈಸನ್ಸ್ ಸಲುವಾಗಿ ಪರ್ಮಿಷನ್ ಕೇಳಿದ್ದು, ನಮ್ಮ ಇಲಾಖೆಯವರು ಅದನ್ನು ರಿಜೆಕ್ಟ್ ಮಾಡಿದ್ದರೆ, ಅದನ್ನು ನಮ್ಮ ಗಮನಕ್ಕೆ ಮಾನ್ಯ ಸದಸ್ಯರು ತರಬೇಕು. ಯಾರು ರಿಜೆಕ್ಟ್ ಮಾಡಿದ್ದಾರೆ? ಯಾವ ಕೇಸು ಅದು ಎಂಬುದನ್ನು ದಯಮಾಡಿ ಮಾನ್ಯ ಸದಸ್ಯರು ತಿಳಿಸಬೇಕು. ಆದರೆ ಒಂದು ಮುಖ್ಯವಾದ ವಿಷಯವನ್ನು ಅವರು ಹೇಳಿದ್ದಾರೆ. ನಮ್ಮ ಗಮನಕ್ಕೆ ತಂದಿದ್ದಾರೆ. ಈ ಉದ್ಯೋಗದಲ್ಲಿ ಸಾಕಷ್ಟು ಮಹಿಳೆಯರು ಇರಬಹುದು. ಮಕ್ಕಳು ಇರಬಹುದು. ಯಾರೇ ಇರಬಹುದು. ಅಂಕಿ ಸಂಖ್ಯೆ ಈ ವಿಷಯದಲ್ಲಾಗಲಿ, ಉದ್ಯೋಗದಲ್ಲಿರತಕ್ಕ ಜನರ ಅಂಕಿ ಸಂಖ್ಯೆ ಅಭಿಪ್ರಾಯ ಏನು ಇದೆ, ಇದರಲ್ಲಿ ನಮಗೆ ಬೀದಿ ಉದ್ಯಮದಲ್ಲಿ ಯಾವ ರೀತಿಯ ಸರ್ವೆ ಮಾಡುಸುತ್ತಿದ್ದೇವೆ, ಅದೇ ರೀತಿಯ ಸರ್ವೆ ಈ ಉದ್ಯಮದ ಬಗ್ಗೆಯೂ ಸರ್ವೆ ಮಾಡಿಸುತ್ತೇವೆ ಎನ್ನುವ ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ ಲೈಸನ್ಸ್ ಕೊಡುವ ವಿಚಾರದಲ್ಲಿ ಯಾವುದಾದರೂ ದೂರು ಇದ್ದರೆ ದಯಮಾಡಿ ಹೇಳಬೇಕು.

ಶ್ರೀ ಬಿ. ಮುನಿಯಪ್ಪ :- ಇಲ್ಲಿ ಏನು ಅಂಕಿ ಅಂಶ ಕೊಟ್ಟಿದ್ದಾರೆ, ಬೆಂಗಳೂರು, ಮೈಸೂರು, ಕೋಲಾರ ಮಹಿಳೆಯರು 2913, ಪುರುಷರು 718 ಎಂದು ಇದನ್ನು ನಾನೂ ಕೂಡ ತಪ್ಪಾದ ಮಾಹಿತಿ ಎಂದು ಹೇಳಬೇಕಾಗುತ್ತದೆ. ಏಕೆಂದರೆ, ನನ್ನ ಗಾಂಧಿನಗರ ಕ್ಷೇತ್ರದಲ್ಲೇ ಕನಿಷ್ಠ 2000 ಕುಟುಂಬಗಳ ಮನೆಯಲ್ಲಿ ಊದುಬತ್ತಿಯನ್ನು ಮಾಡುವಂತಹವರು ಇದ್ದಾರೆ. ಕಾರ್ಖಾನೆಗಳಲ್ಲಿ ಮಾಡುವಂತಹವರು 2000 ಜನ ಇರುತ್ತಾರೆ. ಪೂರ್ತಿ ಮೂರು ಜಿಲ್ಲೆಯಲ್ಲಿರತಕ್ಕಂತಹ ಕಾರ್ಮಿಕರು, ನನ್ನ ಒಂದು ಕ್ಷೇತ್ರದಲ್ಲಿಯೇ ಇದ್ದಾರೆ. ಅಷ್ಟೊಂದು ಜನ ಇದ್ದಾರೆ. ಮತ್ತು ಮಂತ್ರಿಗಳು ಹೇಳುವಂತಹ ಸಂದರ್ಭದಲ್ಲಿ ಮನೆಯಲ್ಲಿ ಮಾಡುವವರ ವಿವರ ಸರ್ಕಾರದ ಗಮನಕ್ಕೆ ಬರುತ್ತಾ ಇಲ್ಲ ಎಂದು ಆದರೆ ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ, ಈ ಊದುಬತ್ತಿ ಕೆಲಸ ಏನು ಮಾಡುತ್ತಾರೆ, ಒಂದು 5 ವರ್ಷಗಳ ಕಾಲ ನಿರಂತರವಾಗಿ ತಮ್ಮ ಹೊಟ್ಟೆಹಸಿಚೀಲ ತುಂಬಿಕೊಳ್ಳುವ ಈ ಕೆಲಸದಲ್ಲಿದ್ದರೆ, ಅವರಿಗೆ ಟಿ.ಬಿ. ರೋಗ ಬರುತ್ತದೆ, ಜೊತೆಗೆ ಹಲವಾರು ಕಾಯಿಲೆಗಳು ಬರುತ್ತವೆ. ಬರೀ ಕಾರ್ಖಾನೆಗಳವರು ಸರ್ಕಾರದ ಅನುಮತಿಯನ್ನು ಪಡೆದು ಮಾಡುವವರನ್ನು ಮಾತ್ರ ಗಮನಿಸಬಾರುದು. ಕೆಲವು ನಿರುದ್ಯೋಗಿಗಳು ಏನು ಇದ್ದಾರೆ, ಎಷ್ಟೋ ಕುಟುಂಬಗಳು ಹೆಣ್ಣುಮಕ್ಕಳು ಸಂಪಾದನೆ ಮಾಡಿ ಜೀವನ ಮಾಡುವಂತಹ ಕುಟುಂಬಗಳು ಇದ್ದಾವೆ. ಅಂತಹವನ್ನು ಸರ್ಕಾರ ಪರಿಗಣನೆಗೆ ತೆಗೆದುಕೊಂಡು ಅವರ ಆರೋಗ್ಯವನ್ನು ತಪಾಸಣೆ ಮಾಡಿ ಅವರ ಅಂಕಿ ಅಂಶಗಳನ್ನು ಸರ್ಕಾರದಲ್ಲಿ ಇಟ್ಟು, ಅವರಿಗೆ ಯಾವ ರೀತಿಯಾದ ಚಿಕಿತ್ಸೆ ಬೇಕೋ ಅಂತಹ ಔಷದೋಪಾಚಾರಗಳನ್ನು ಸರ್ಕಾರ ಕೊಡುವಂತಹ ವ್ಯವಸ್ಥೆ ಮಾಡಬೇಕು. ಅದು ಸರ್ಕಾರದ ಜವಾಬ್ದಾರಿ. ಆ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ಸಚಿವರನ್ನು ಕೇಳುತ್ತೇನೆ.

ಉಪಾಧ್ಯಕ್ಷರು :- ಇದು ಉತ್ತಮವಾದ ಸಲಹೆ.

ಶ್ರೀ ಜೆ. ವಿ. ಶ್ರೀರಾಮರೆಡ್ಡಿ :- ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ. ಟ್ಯಾಕ್ಸ್ ಇವೇಶನ್ ಬಗ್ಗೆ ಕೇಳಿದ್ದೆ. ಎರಡನೆಯದು ಇವರು ಅವರು ಅರ್ಜಿ ಹಾಕಿದರೆ ನಾವು ಲೈಸನ್ಸ್ ಕೊಡುತ್ತೇವೆ ಎಂದು ಹೇಳುತ್ತಾರೆ. ಅವರು ಅರ್ಜಿ ಹಾಕದೆ ಇರುವುದೇ ಟ್ಯಾಕ್ಸ್ ಇವೇಶನ್ ಮಾಡಲಿಕ್ಕೆ ಅವರಾಗಿ ಅರ್ಜಿ ಹಾಕುವುದಿಲ್ಲ ಅರ್ಜಿ ಹಾಕಿದ ಮೇಲೆ ಟ್ಯಾಕ್ಸ್ ಕಟ್ಟಬೇಕಾಗುತ್ತದೆ, ಕಾನೂನು ಬದ್ಧವಾಗಿ ಕಾರ್ಮಿಕರಿಗೆ ವೇತನ ಕೊಡಬೇಕಾಗುತ್ತದೆ; ಇದಕ್ಕಾಗಿ ಅವರು ಅರ್ಜಿ ಹಾಕುವುದಿಲ್ಲ. ಅವರು ಅರ್ಜಿ ಹಾಕಿದರೆ, ನಾವು ಅನುಮತಿಯನ್ನು ಕೊಡುತ್ತೇವೆ, ಲೈಸನ್ಸ್ ಕೊಡುತ್ತೇವೆ ಎಂದು ಹೇಳತಕ್ಕಂತಹದ್ದು ಸರಿಯಲ್ಲ. ಇವರೇ ಸರ್ವೇ ಮಾಡಿ, ಯಾರ್ಯಾರು ನಡೆಸುತ್ತಿದ್ದಾರೆ ಕಂಪನಿ ಆಕ್ಟ್ ಪ್ರಕಾರ ಇಂಡಸ್ಟ್ರೀಸ್ ಆಕ್ಟ್ ಪ್ರಕಾರ ಯಾರ್ಯಾರು ನಡೆಸುತ್ತಿದ್ದಾರೆಂಬುದನ್ನು ಸರ್ವೇ ಮಾಡಿಸಬೇಕು. ಇಲ್ಲಿ ಏನಾಗುತ್ತದೆ ಅಂದರೆ, ಮಹಿಳೆಯರು ಸಾಮಾನ್ಯವಾಗಿ ಏನು ಮಾಡುತ್ತಿದ್ದಾರೆ ಅಂದರೆ ಕಾರ್ಖಾನೆ ಮಾಲೀಕರ ಹತ್ತಿರ ಬಂದು ಪ್ರತಿ ದಿವಸ ಇಷ್ಟು ಸಾವಿರ ಕಡ್ಡಿ, ಅದಕ್ಕೆ ಬೇಕಾದ ಎಲ್ಲಾ ಸಲಕರಣೆಗಳನ್ನು ತೆಗೆದುಕೊಂಡು ಹೋಗಿ, ಮನೆಗಳಲ್ಲಿ ಮಾಡಿ, ಅದನ್ನು ಮಾರನೆಯ ದಿವಸ ಕಾರ್ಖಾನೆಗಳಿಗೆ ತಂದು ಕೊಡುತ್ತಾರೆ. ಇವರು ಆ ಮಹಿಳಾ ಕಾರ್ಮಿಕರು ಕಂಪನಿ ಲೆಕ್ಕಕ್ಕೆ ಬರುವುದಿಲ್ಲ ಎಂದು ಹೇಳುತ್ತಿದ್ದಾರೆ. ಇದು ಮುಖ್ಯವಾಗಿರತಕ್ಕ ಪ್ರಶ್ನೆ. ಇವರುಗಳನ್ನು ಕಂಪನಿ ಲೆಕ್ಕಕ್ಕೆ ತೆಗೆದುಕೊಂಡು ಇದನ್ನು ಸರ್ವೇ ಮಾಡಿಸಿ ಅದನ್ನು ಪತ್ತೆ ಹಚ್ಚಿದರೆ ಮಾತ್ರ ಈ ಸಮಸ್ಯೆ ಪರಿಹಾರವಾಗುತ್ತದೆ. ಎರಡನೆಯದು ಟ್ಯಾಕ್ಸ್ ಇವೇಷನ್ ತಪ್ಪಿಸಬೇಕು. 2682 ಕೋಟಿ ಅಂತರ ರಾಷ್ಟ್ರೀಯ ಮಾರುಕಟ್ಟೆ ಇದೆ. ಈ ಟ್ಯಾಕ್ಸ್ ಇವೇಷನ್ ತಪ್ಪಿಸಲಿಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ?

ಶ್ರೀ ಸಿ. ಗುರುನಾಥ್ :- ಮಾನ್ಯ ಸದಸ್ಯರಾದ ಶ್ರೀ ರಾಮರೆಡ್ಡಿಯವರು ಟ್ಯಾಕ್ಸ್‌ಗೆ ಸಂಬಂಧಪಟ್ಟ ಹಾಗೆ ಒಂದು ವಿಷಯ ಹೇಳಿದರು. ಆಗರಬತ್ತಿ ಉದ್ಯಮದಿಂದ ಸರ್ಕಾರಕ್ಕೆ ಇಷ್ಟೆಲ್ಲಾ ಬರಬಹುದು. ಆದರೆ ಅಲ್ಲಿಯ ಕೆಲಸಗಾರರ ಪರವಾಗಿ ಇಷ್ಟು ಟ್ಯಾಕ್ಸ್ ಬಂತು ಎನ್ನುವುದು ಸುಳ್ಳು ಇರಬಹುದು. ಟಿಕ್ಕಿಕ್ ಬೇರೆ ಆಗಿರಬಹುದು. ಅದನ್ನು ಎಕ್ಸ್‌ಪೋರ್ಟ್ ಮಾಡುವುದರಿಂದ ನಮ್ಮ ಸರ್ಕಾರಕ್ಕೆ ಬರತಕ್ಕ ಆದಾಯ ಹೆಚ್ಚು ಇರಬಹುದು. ಆದರ ಅಂಕಿ ಸಂಖ್ಯೆಗೂ ಅಲ್ಲಿರತಕ್ಕ ದುಡ್ಡಿಗೂ ಯಾವುದೇ ಸಂಬಂಧ ಇಲ್ಲದೇ ಇರಬಹುದೆಂಬುದು ನನ್ನ ಅನಿಸಿಕೆ. ಮಾನ್ಯ ಮುನಿಯಪ್ಪನವರು ಹೇಳಿದಂತಹ ಸಲಹೆ ಏನು ಈಗಾಗಲೇ ಸರ್ಕಾರ ಇವರ ಪರವಾಗಿ ವೆಲ್‌ಫೇರ್ ಬೋರ್ಡ್ ಮಾಡುತ್ತಿದ್ದೇವೆ. ಆ ಕಾರಣಕ್ಕಾಗಿ ನಾವು ಎಲ್ಲಾ ಕಡೆ ಸರ್ವೇ ಮಾಡುತ್ತಿದ್ದೇವೆ. ಸರ್ವೇ ಮಾಡಿದ ನಂತರ ಅವರಿಗೆ ಆಗತಕ್ಕ ಯಾವುದೇ ಅನಾರೋಗ್ಯ ಇದೆ, ಅವರಿಗೆ ಕೊಡಬೇಕಾದ ಸವಲತ್ತು ಇದೆ, ಕಾಯಿದೆ ಬದ್ಧವಾಗಿ ಕೊಡಬೇಕಾದ ಕನಿಷ್ಠ ವೇತನ ಏನು ಇದೆ, ಅದನ್ನು ಸರ್ಕಾರದ ವತಿಯಿಂದ ಅವರಿಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ವಿಷಯ:- ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರುಕಟ್ಟೆ ಸಹಕಾರಿ ಸಂಘಗಳ ಕುರಿತು.

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 404 (2963)